ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ಸೋಮವಾರ, ದಿನಾಂಕ: 23ನೇ ಮಾರ್ಚ್, 2020

ರಾಜ್ಯದಲ್ಲಿ ಅಂತರ್ಜಲ ರಕ್ಷಿಸುವ ಬಗ್ಗೆ

ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-

1475 (1667) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಅಂತರ್ಜಲ ಸಂರಕ್ಷಣೆ ದೃಷ್ಟಿಯಿಂದ ಯಾವ್ಯಾವ ಮರಗಳನ್ನು ಬೆಳೆಯಬಾರದೆಂದು ಸರ್ಕಾರ ಕಾಯ್ದೆ ಅಥವಾ ಷರತ್ತು ವಿಧಿಸಿದೆ; (ಪ್ರತಿ ನೀಡುವುದು)

(ಆ) ಈಗಾಗಲೇ ಬೆಳೆದಿರುವ ಇಂತಹ ಮರಗಳನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿ ಎಷ್ಟು ಎಕರೆ ವಿಸ್ತೀರ್ಣದಲ್ಲಿ ಇಂತಹ ಮರಗಳನ್ನು ಬೆಳೆಯಲಾಗಿದೆ; ಗ್ರಾಮ ಮತ್ತು ವಿಸ್ತೀರ್ಣವಾರು ವಿವರ ನೀಡುವುದು;

(ಈ) ಸೋಂಪುರ ಹೋಬಳಿಯ ಕಾಸರಘಟ್ಟ ಗ್ರಾಮ ವ್ಯಾಪ್ತಿಯ ಎಷ್ಟು ಎಕರೆ ವಿಸ್ತೀರ್ಣದಲ್ಲಿ ಇಂತಹ ಮರಗಳನ್ನು ಬೆಳೆಯಲಾಗಿದೆ; (ಹೆಸರು ಮತ್ತು ವಿಸ್ತೀರ್ಣವಾರು ವಿವರ ನೀಡುವುದು)

(ಉ) ಸದರಿ ಗ್ರಾಮ ವ್ಯಾಪ್ತಿಯಲ್ಲಿ ಇಂತಹ ಮರಗಳನ್ನು ತೆರವುಗೊಳಿಸಲು ಈವರೆಗೂ ಕೈಗೊಂಡಿರುವ ಕ್ರಮ ವಿವರ ಮತ್ತು ಯಾವ ನಿಗದಿತ ದಿನಾಂಕದೊಳಗೆ ಮರಗಳನ್ನು ತೆರವುಗೊಳಿಸಲಾಗುವುದು ?

(ಊ) ಲ್ಯಾಪ್‌ಟಾಪ್‌ಗಳಿಗೆ ಹೆಚ್ಚಿನ ಮೊತ್ತದ ದರ ನೀಡಿ ಖರೀದಿಸಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿರುವುದು ನಿಜವೆ; ಇದ್ದಲ್ಲಿ ಈ ಅವ್ಯವಹಾರದ ಬಗ್ಗೆ ಸರ್ಕಾರವು ತನಿಖೆ ನಡೆಸಿ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)